**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 371/2018**

ಚಾ.ಸಾ-02, ಪ್ರಾ.ಸಾ-02

| | | |
|---|---|---|
| ಹೆಸರು | : | ಕೊಂಬರಯ್ಯ |
| ತಂದೆಯ ಹೆಸರು | : | ಲೇಟ್ ಅಂಕಯ್ಯ |
| ವಯಸ್ಸು | : | 60 |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಹಾರೋಹಳ್ಳಿ ಗ್ರಾಮ, ಮೈಸೂರು ತಾಲ್ಲೂಕು. |

**ದಿನಾಂಕ 08.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಪ್ರಾಸಾ-1 ನನ್ನ ಮಗಳು. ಚಾಸಾ-3 ಮತ್ತು 4 ರವರ ಪರಿಚಯವಿದೆ. ಈ ದಿನ ನ್ಯಾಯಾಲಯದಲ್ಲಿರುವ 1ನೇ ಆರೋಪಿತ ನನ್ನ ಅಳಿಯ. 2ನೇ ಆರೋಪಿತಳು ನನ್ನ ಬೀಗತಿ. 3ನೇ ಆರೋಪಿತ ನನ್ನ ಅಳಿಯನ ತಮ್ಮ. 4ನೇ ಆರೋಪಿತಳು ನನ್ನ ಸಂಬಂಧಿ. 2 ಮತ್ತು 4ನೇ ಆರೋಪಿತರು ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯ ಬಗ್ಗೆ ಅವರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

ಕಳೆದ 15 ವರ್ಷಗಳ ಹಿಂದೆ ನನ್ನ ಮಗಳ ಮತ್ತು 1ನೇ ಆರೋಪಿತನ ವಿವಾಹವು ಆಗಿರುತ್ತದೆ. ವಿವಾಹವಾದ 2-3 ವರ್ಷಗಳವರೆಗೆ ಅವರು ಚೆನ್ನಾಗಿದ್ದರು. ಅವರಿಗೆ ಒಂದು ಹೆಣ್ಣುಮಗು ಜನಿಸಿರುತ್ತದೆ.

ವಿವಾಹವಾದ 2-3 ವರ್ಷಗಳ ನಂತರ 1ನೇ ಆರೋಪಿತ ನನ್ನ ಮಗಳಿಗೆ ಹೊಡೆಯುತ್ತಿದ್ದ ಮತ್ತು ಹಿಂಸೆ ನೀಡುತ್ತಿದ್ದ. ಆಕೆಗೆ ಸರಿಯಾಗಿ ಆಹಾರ ಕೊಡುತ್ತಿರಲಿಲ್ಲ. ಆಕೆಯು ನನಗೆ ದೂರವಾಣಿ ಕರೆ ಮಾಡಿ ತಿಳಿಸಿದಾಗ, ನಾನು ಆಕೆಯ ಗಂಡನಾದ 1ನೇ ಆರೋಪಿತನ ಬಳಿ ಹಣವನ್ನು ಪಡೆದು ಜೀವನ ಮಾಡುವಂತೆ ಹೇಳುತ್ತಿದ್ದೆ.

2-3 ಬಾರಿ ನ್ಯಾಯ ಪಂಚಾಯಿತಿ ಮಾಡಿ ನನ್ನ ಮಗಳನ್ನು ಸರಿಯಾಗಿ ನೋಡಿಕೊಳ್ಳುವಂತೆ 1ನೇ ಆರೋಪಿತನಿಗೆ ಹೇಳಿದ್ದೆವು. ಆತ ಪುನ: ಗಲಾಟೆ ಮಾಡಿ ನನ್ನ ಮಗಳಿಗೆ ತೊಂದರೆ ಕೊಡುತ್ತಿದ್ದ.

ಕಳೆದ 9 ವರ್ಷಗಳ ಹಿಂದೆ ಒಂದು ದಿನ 1ನೇ ಆರೋಪಿತ ನನ್ನ ಮಗಳ ಜೊತೆ ಗಲಾಟೆ ಮಾಡಿ ಆಕೆಗೆ ಹೊಡೆದು ಮನೆಯಿಂದ ಹೊರಗೆ ಹಾಕಿದ್ದನು. ನಾನು ಮರುದಿನ ಬೆಳಿಗ್ಗೆ 1ನೇ ಆರೋಪಿತನ ಮನೆಗೆ ಹೋಗಿ ಘಟನೆಯ ಕುರಿತು ವಿಚಾರಿಸಿದ್ದು, ನಂತರ ನನ್ನ ಮಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಘಟನೆಯ ಕುರಿತು 1ನೇ ಆರೋಪಿತನ ಗ್ರಾಮದವರಿಗೆ ತಿಳಿಸಿದ್ದು, ಅವರು ಕೂಡ ದೂರು ಕೊಡುವಂತೆ ನಮಗೆ ತಿಳಿಸಿದರು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ**

**ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 10.09.2017 ರಂದು ರಾತ್ರಿ 11.00 ಗಂಟೆಗೆ ನನ್ನ ಮಗಳ ಮೇಲೆ 1ನೇ ಆರೋಪಿತ ಗಲಾಟೆ ಮಾಡಿದ್ದ ಎಂದರೆ ದಿನಾಂಕ ಗೊತ್ತಿಲ್ಲ, ಆ ಸಮಯದಲ್ಲಿ ಗಲಾಟೆ ಮಾಡಿದ್ದನು. 2 ರಿಂದ 4ನೇ ಆರೋಪಿತರು ಕೂಡ ನನ್ನ ಮಗಳ ಮೇಲೆ ಗಲಾಟೆ ಮಾಡಿದ್ದರು ಎಂದರೆ ಸರಿ. 4ನೇ ಆರೋಪಿತಳು ನನ್ನ ಮಗಳ ತಲೆಯ ಜುಟ್ಟನ್ನು ಹಿಡಿದು ಗೋಡೆಗೆ ತಲೆಯನ್ನು ಗುದ್ದಿಸಿರುತ್ತಾಳೆಂದು ನನ್ನ ಮಗಳು ನನಗೆ ಹೇಳಿದಳು ಎಂದರೆ ಸರಿ. ಆಕೆ ಮತ್ತು 1ನೇ ಆರೋಪಿತ ತಮ್ಮ ತಮ್ಮ ಕೈಗಳಿಂದ ನನ್ನ ಮಗಳಿಗೆ ಪರಚಿರುತ್ತಾರೆ ಎಂದು ನನ್ನ ಮಗಳು ನನಗೆ ಹೇಳಿದಳು ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಕೆ.ಎಸ್. ವಕೀಲರಿಂದ ಆರೋಪಿತರ ಪರವಾಗಿ :**

ನನ್ನ ಹೆಂಡತಿ ಭಾರತಿ ಕಡೆಯಿಂದ 1ನೇ ಆರೋಪಿತ ನನಗೆ ಸಂಬಂಧಿ ಎಂದರೆ ಸರಿ. ಆತ ಹುರಳಿಕ್ಯಾತನಹಳ್ಳಿ ಗ್ರಾಮದಲ್ಲಿ ಆತನ ಅಜ್ಜಿಯ ಜೊತೆ ವಾಸವಾಗಿದ್ದ ಎಂದರೆ ಸರಿ. ಆತ ತುಂಬಲ ಗ್ರಾಮಕ್ಕೂ ಬರುತ್ತಿದ್ದ. ಆ ಹುರಳಿಕ್ಯಾತನಹಳ್ಳಿಯಿಂದ ತುಂಬಲ ಗ್ರಾಮಕ್ಕೆ 30 ಕಿ ಮೀ ಅಂದರೆ ಸರಿಯಲ್ಲ.

ನನ್ನ ಮಗಳ ವಿವಾಹವಾದ ನಂತರ ಈ ಪ್ರಕರಣವನ್ನು ದಾಖಲಿಸುವವರೆಗೂ ಆಕೆ ಮತ್ತು ಆಕೆಯ ಗಂಡ ಚೆನ್ನಾಗಿದ್ದರು ಎಂದರೆ

ಸರಿಯಲ್ಲ. ಹುರಳಿಕ್ಯಾತನಹಳ್ಳಿಯಲ್ಲಿ 1ನೇ ಆರೋಪಿತ ಇದ್ದ ಮನೆಯು ಹಳೇ ಮನೆಯಾಗಿದ್ದು, ಅಲ್ಲಿ ಸೌಕರ್ಯಗಳು ಕಡಿಮೆಯಿದ್ದವು ಎಂದರೆ ಸರಿ. ನನ್ನ ಮಗಳು ಮತ್ತು 1ನೇ ಆರೋಪಿ ಮೈಸೂರಿನಲ್ಲಿ ವಾಸ ಮಾಡುವಂತೆ ಮತ್ತು ಇಬ್ಬರೂ ಕೆಲಸಕ್ಕೆ ಸೇರಿ ಒಳ್ಳೇ ಜೀವನ ನಡೆಸಬಹುದು ಎಂದು ನಾನು ನನ್ನ ಮಗಳಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಆ ವಿಷಯವನ್ನು 1ನೇ ಆರೋಪಿತ ಕೇಳದಿದ್ದಾಗ ನಾನು ಈ ಮೇಲೆ ಹೇಳಿದಂತೆ 2-3 ಬಾರಿ ಪಂಚಾಯಿತಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹುರಳಿಕ್ಯಾತನಹಳ್ಳಿಯಲ್ಲಿ 1ನೇ ಆರೋಪಿತ ತನ್ನ ಅಜ್ಜಿಯ ಸೇವೆಯನ್ನು ಮಾಡುತ್ತಿದ್ದ ಬಗ್ಗೆ ನನ್ನ ಮಗಳಿಗೆ ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತ ಈ ಮೇಲೆ ಹೇಳಿದಂತೆ ನಮ್ಮ ಮಾತನ್ನು ಕೇಳದ ಕಾರಣ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ.

ನನ್ನ ಮಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಆಕೆಗೆ ಕಬ್ಬಿಣದ ರಾಡಿನಿಂದ ಹಲ್ಲೆಯಾಗಿದೆ ಎಂದು ವೈದ್ಯರ ಮುಂದೆ ಹೇಳಿಕೆ ನೀಡಲಾಗಿತ್ತು ಎಂದರೆ ಸರಿಯಲ್ಲ.

ಈ ಮೇಲೆ ಹೇಳಿದಂತೆ ರಾತ್ರಿ 11.00 ಗಂಟೆಗೆ ಗಲಾಟೆ ಆಗಿದ್ದ ವಿಷಯ ಸತ್ಯವಿರುತ್ತದೆ. ಆ ವಿಷಯವನ್ನು ನನ್ನ ಮಗಳು ನನಗೆ ದೂರವಾಣಿ ಕರೆ ಮೂಲಕ ತಿಳಿಸಿದ್ದಳು. ಘಟನೆಯಾದ ಆ ಸಮಯವನ್ನು ದೂರಿನಲ್ಲಿ ಬರೆಸಲಾಗಿದೆಯೇ ಎಂದರೆ ನನಗೆ ಗೊತ್ತಿಲ್ಲ.

4ನೇ ಆರೋಪಿತಳು ಚಟ್ನಹಳ್ಳಿ ಗ್ರಾಮದಿಂದ ಹುರಳಿಕ್ಯಾತನಹಳ್ಳಿ ಗ್ರಾಮಕ್ಕೆ ವಿವಾಹವಾಗಿರುತ್ತಾಳೆ ಎಂದರೆ ಸರಿ. ಆಕೆಯು ಹುರಳಿಕ್ಯಾತನಹಳ್ಳಿಯಲ್ಲಿ ಅಂಗನವಾಡಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿ. ಆಕೆಯು ಹುರಳಿಕ್ಯಾತಹಳ್ಳಿಯಲ್ಲಿ ವಾಸವಾಗಿರುತ್ತಾಳೆ ಎಂದರೆ ಸರಿ. ಮೂರು ಬಾರಿ ಗಲಾಟೆಯಾಗಿದ್ದು, ಕೊನೆಯದಾಗಿ ಹುರಳಿಕ್ಯಾತನಹಳ್ಳಿಯಲ್ಲಿ ಗಲಾಟೆಯಾದ ನಂತರ ದೂರನ್ನು ನೀಡಿರುತ್ತೇವೆ.

4ನೇ ಆರೋಪಿತಳು ಮತ್ತು ಉಳಿದ ಆರೋಪಿತರು ಸಂಬಂದಿಕರು ಎಂದರೆ ಸರಿ. ನಾನು ಹೇಳುವಂತೆ ಯಾವುದೇ ಗಲಾಟೆ ಆಗಿಲ್ಲದೆ ಇದ್ದರೂ ಕೂಡ 4ನೇ ಆರೋಪಿತಳ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ನಾನು ಹೇಳುವಂತೆ 1ನೇ ಆರೋಪಿತ ಯಾವುದೇ ಗಲಾಟೆ ಮಾಡಿಲ್ಲದೆ ಇದ್ದರೂ ಕೂಡ ಆತ ನಮ್ಮ ಮಾತನ್ನು ಕೇಳದ ಕಾರಣ ನಾವು ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**